# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2016-17ನೇ** ಸಾಲಿನಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ **ರೂ.50.00ಲಕ್ಷಗಳನ್ನು** ಮರು ಹೊಂದಾಣಿಕೆ ಮೂಲಕ ಹೆಚ್ಚುವರಿಯಾಗಿ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಆಇ/473/ಬಿಆರ್‌ಎಸ್/2016, ದಿನಾಂಕ 21.03.2017.

## ಪ್ರಸ್ತಾವನೆ :

ಮೇಲಿನ ಓದಲಾದಂತೆ, ಆರ್ಥಿಕ ಇಲಾಖೆಯು **2016-17ನೇ** ಸಾಲಿನ ಆಯವ್ಯಯ **ಲೆಕ್ಕ ಶೀರ್ಷಿಕೆ 2515-00-101-0-24-059(ಯೋಜನೆ)ಯಡಿ** ಒದಗಿಸಲಾದ **ರೂ.1125.00ಲಕ್ಷ** ಅನುದಾನದ ಪೈಕಿ **ರೂ.50.00**ಲಕ್ಷಗಳನ್ನು ಉಳಿತಾಯ ಗುರುತಿಸಿ **ಲೆಕ್ಕ ಶೀರ್ಷಿಕೆ 2501-04-105-0-02-059 (ಯೋಜನೆ)ಯಡಿ** ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ **ರೂ.50.00**ಲಕ್ಷಗಳನ್ನು ಮರುಹೊಂದಾಣಿಕೆ ಮೂಲಕ ಹೆಚ್ಚುವರಿಯಾಗಿ ಒದಗಿಸಿ ಮಂಜೂರಾತಿ ನೀಡಿದೆ.

ಇದರನ್ವಯ **2016-17ನೇ** ಸಾಲಿನಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಉದ್ದೇಶಿತ ಸಂಖ್ಯೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹೆಚ್ಚುವರಿಯಾಗಿ **ರೂ.50.00ಲಕ್ಷಗಳನ್ನು** ಲೆಕ್ಕ ಶೀರ್ಷಿಕೆ **2501-04-105-0-02-059ರಡಿ** ಬಿಡುಗಡೆ ಮಾಡಲು ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/51/ಜೈಅಯೋ/2016 ಬೆಂಗಳೂರು, ದಿನಾಂಕ.23.03.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2016-17ನೇ** ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ **2515-00-101-0-24-059(ಯೋಜನೆ)ಯಡಿ** ಒದಗಿಸಿದ **ರೂ.1125.00ಲಕ್ಷಗಳಲ್ಲಿ** ಗುರುತಿಸಲಾದ ಉಳಿತಾಯದ ಪೈಕಿ **ರೂ.50.00ಲಕ್ಷ(ಐವತ್ತು ಲಕ್ಷ ರೂಪಾಯಿಗಳು ಮಾತ್ರ)**ಗಳನ್ನು ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಉದ್ದೇಶಿತ ಸಂಖ್ಯೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಲೆಕ್ಕ ಶೀರ್ಷಿಕೆ **2501-04-105-0-02-059ರಡಿ** ಮರು ಹೊಂದಾಣಿಕೆ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆರವರು ಗ್ರಾಂಟ್-ಇನ್-ಏಡ್ ಬಿಲ್ಲನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು, ಖಜಾನೆಯಿಂದ ಅನುದಾನ ಪಡೆಯತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸುವುದು ಹಾಗೂ ಬಿಡುಗಡೆಯಾದ ಅನುದಾನಕ್ಕೆ ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಹಾಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : **ಆಇ/324/ವೆಚ್ಚ-6/2016,** ದಿನಾಂಕ **22.03.2017**ರಲ್ಲಿ ಸಹಮತಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳುರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು.
3. ಜಂಟಿ ನಿರ್ದೇಶಕರು ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
6. ಉಪ ನಿರ್ದೇಶಕರು (ತ್ರಾಂತಿಕ), ಗ್ರಾಮೂಸೌ ಕೋಶ, ಗ್ರಾಅಪ ಇಲಾಖೆ.
7. ಉಪ ನಿರ್ದೇಶಕರು, TNMC, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
8. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
9. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.